**ಸಾಕ್ಷಿಯನ್ನು ದಿಃ12.01.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ಈ ದಾವೆಯನ್ನು ವಾದಿ ಯಾವ ಕಾರಣಕ್ಕೆ ಹಾಕಿದ್ದಾರೆ ಎಂದರೆ, ವಾದಿ ಹಾಗೂ ಪ್ರತಿವಾದಿ ನಡುವೆ ಜಮೀನು ವ್ಯಾಪಾರ ಆಗಿದ್ದು, ಸದರಿ ವಿಚಾರವಾಗಿ ಹಾಕಿದ್ದಾರೆ.

2. ಯಾವ ದಿನಾಂಕದಂದು ವ್ಯಾಪಾರ ಆಗಿತ್ತು ಎಂದರೆ, ದಿಃ 27.04.2011 ರಲ್ಲಿ ಆಗಿತ್ತು.

3. ಸದರಿ ವ್ಯಾಪಾರಕ್ಕೆ ಬಸನಹಳ್ಳಿಯ ಪ್ರಕಾಶ, ಗಾಂಧಿನಗರದ ಕರಿಗೌಡ, ತಿರುಮಲಾಪುರದ ಲೋಕೇಶ, ಮಂಜೇಶ ಹಾಗೂ ಸುಮಾರು ಜನರು ಇದ್ದರು.

4. ಸದರಿ ವ್ಯಾಪಾರ ಶಿವಣ್ಣ ರವರ ಮನೆಯ ಬಳಿ ಆಗಿರುತ್ತದೆ. 2 ಎಕರೆ 19 ಗುಂಟೆ 3 ಲಕ್ಷ 50 ಸಾವಿರಕ್ಕೆ ವ್ಯಾಪಾರ ಆಗಿತ್ತು.

5. ವ್ಯಾಪಾರ ಆದ ನಂತರ ಏನಾಯಿತು ಎಂದರೆ ದಿಃ 24.04.2013 ರಲ್ಲಿ 2 ಎಕರೆ ಕೊಡುವುದಿಲ್ಲ 1 ಎಕರೆ ಕೊಡುತ್ತೇವೆ ಎಂದು ಪುನಃ 1 ಲಕ್ಷಕ್ಕೆ ವ್ಯಾಪಾರ ಆಗಿ, 95 ಸಾವಿರ ಹಣ ನೀಡಿ ವ್ಯಾಪಾರ ಆಗಿರುತ್ತದೆ. ಸದರಿ ವ್ಯಾಪಾರಕ್ಕೆ ಮೇಲೆ ಹೇಳಿದ ಜನರೇ ಸೇರಿದ್ದರು. ನಾನು ಸಹ ಇದ್ದೆ.

6. ಎಕರೆಗೆ 1 ಲಕ್ಷ ಲೆಕ್ಕದಲ್ಲಿ ವ್ಯಾಪಾರ ಆಗಿತ್ತು. ಶಿವಣ್ಣ ರವರು ಎಷ್ಟಕ್ಕೆ ಕೇಳಿದರು ಎಂದರೆ, ಅವರು ಕೇಳಿಲ್ಲ ಮೊದಲೇ ವ್ಯಾಪಾರ ಆಗಿತ್ತು ಎಂದು ನುಡಿಯುತ್ತಾರೆ.

7. ಅದೇ ದಿನ ಕರಾರು ಪತ್ರ ಬರೆದು ನೊಂದಣಿಯಾಗಿರುತ್ತದೆ. ಪತ್ರ ಬರೆಯುವಾಗ ನಾನು ಇದ್ದೆ. ಬೇರೆ ಯಾರು ಇದ್ದರು ಎಂದರೆ, ನೋಡಿ ಹೇಳಬೇಕು ಎಂದು ನುಡಿಯುತ್ತಾರೆ. ಯಾರ್ಯಾರು ಬಂದಿದ್ದರು ಎಂದು ಖುದ್ದಾಗಿ ನಿಮಗೆ ಗೊತ್ತಿಲ್ಲ ಎಂದರೆ, ಪ್ರಕಾಶ, ಕರಿಗೌಡರು ಮತ್ತು ನಮ್ಮ ಊರಿನ ಇನ್ನೂ ಇಬ್ಬರು ಇದ್ದರು, ಅವರ ಹೆಸರು ಗೊತ್ತಿಲ್ಲ.

8. ಪತ್ರ ಬರೆಯಲು ವಿಜಯೇಂದ್ರ ರವರು ಮಾಹಿತಿ ನೀಡಿರುತ್ತಾರೆ. ಸದರಿ ಪತ್ರದಲ್ಲಿ ಬರೆದ ವಿಚಾರಗಳ ಬಗ್ಗೆ ನಿಮಗೆ ಗೊತ್ತಿಲ್ಲ ಎಂದರೆ, 2 ಎಕರೆ 19 ಗುಂಟೆ 3 ಲಕ್ಷ 50 ಸಾವಿರಕ್ಕೆ ಬರೆದುಕೊಡುವುದು ಎಂದು ಮಾತುಕತೆಯಾಗಿತ್ತು.

9. ಯಾವ ಚಕ್ಕುಬಂದಿ ನೀಡಿ ಪತ್ರ ಬರೆದಿದ್ದಾರೆ ಎಂದರೆ, ಪೂರ್ವಕ್ಕೆಃ ರಸ್ತೆ ಹಾಗೂ ಅವರದೇ ಜಾಗ, ಪಶ್ಚಿಮಕ್ಕೆ ಶಿವಣ್ಣ ರವರ ಜಾಗ, ದಕ್ಷಿಣಕ್ಕೆ ನಾಗರಾಜು ಹಾಗೂ ಉತ್ತರಕ್ಕೆಃ ವಿಶ್ವನಾಥ ರವರ ಜಾಗ.

10. ದಿಃ 24.04.2023 ರಂದು ಸುಮಾರು 12 ಗಂಟೆಗೆ ನೊಂದಣಿಯಾಗಿತ್ತು. ಆ ದಿನ ಸದರಿ ಪತ್ರ ಹೊರತುಪಡಿಸಿ ಬೇರೆ ಯಾವುದೇ ಪತ್ರ ನೊಂದಣಿಯಾಗಿಲ್ಲ. ಸದರಿ ಪತ್ರಕ್ಕೆ ಪ್ರಕಾಶ ರವರು ಸಹಿ ಹಾಕಿಲ್ಲ. ಲೋಕೇಶ ರವರು ಸಾಕ್ಷಿಯಾಗಿ ಸಹಿ ಹಾಕಿರುತ್ತಾರೆ. ನಾನು 3 ಕಡೆ ಸಹಿ ಹಾಕಿರುತ್ತೇನೆ. ಲೋಕೇಶ ರವರು ಸಹ 3 ಕಡೆ ಹಾಕಿರುತ್ತಾರೆ.

11. ಪತ್ರ ಬರೆಸುವಾಗ ನಾನು ಸಹ ಇದ್ದೆ.

12. ನೀವು ಹೇಳುವಂತೆ ನೀವು ಆ ಪತ್ರ ಬರೆಯುವಾಗ ಹಾಜರಿರದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

13. ಆ ದಿನ ಎಷ್ಟು ಪತ್ರ ವಾದಿ ಹಾಗೂ ಪ್ರತಿವಾದಿಗೆ ನೊಂದಣಿಯಾಗಿವೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

14. ನೀವು, ವಾದಿ ಹಾಗೂ ಪತ್ರಬರಹಗಾರರು ಸೇರಿಕೊಂಡು ನಿಪಿ - 1 ನ್ನು ಸೃಷ್ಠಿ ಮಾಡಿದ್ದೀರಾ ಎಂದರೆ ಸರಿಯಲ್ಲ.

15. ಆ ದಿನ ನನ್ನ ಸಮ್ಮುಖದಲ್ಲಿ 95 ಸಾವಿರ ಹಣವನ್ನು ನೀಡಿರುತ್ತಾರೆ. ಸದರಿ ಹಣವನ್ನು ನೊಂದಣಿ ಕಛೇರಿಯಲ್ಲಿ ನೀಡಿರುತ್ತಾರೆ.

16. ಶಿವಣ್ಣ ರವರು ತಿಮ್ಮೇಗೌಡರಿಗೆ ಹಣ ನೀಡಿದ್ದಾರಾ ಎಂದರೆ, ಇಲ್ಲ.

17. ವಾದಿ ಮತ್ತು ಪ್ರತಿವಾದಿಗೆ ಯಾವುದೇ ಜಮೀನು ವ್ಯಾಪಾರ ಆಗದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

18. ಈ ದಿನ ನಿಮ್ಮನ್ನು ತಿಮ್ಮೇಗೌಡರ ಸಾಕ್ಷಿ ಹೇಳಲು ಕರೆದುಕೊಂಡು ಬಂದಿದ್ದಾರೆ ಎಂದರೆ, ಇಲ್ಲ ನನಗೆ ನೊಟೀಸು ಬಂದಿತ್ತು ಎಂದು ನುಡಿಯುತ್ತಾರೆ.

19. ನಿಮ್ಮ ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳು ಗೊತ್ತಾ ಎಂದರೆ, ಗೊತ್ತು, ಜಮೀನು ವಿಚಾರ ಬರೆದಿರುತ್ತಾರೆ. ಅದನ್ನು ಬರೆಯಲು ಯಾರು ಮಾಹಿತಿ ನೀಡಿದ್ದಾರೆ ಎಂದರೆ, ನಾನೇನು ಬರೆಸಿಲ್ಲ ಎಂದು ನುಡಿಯುತ್ತಾರೆ.

20. ಈ ದಾವೆಯ ಬಗ್ಗೆ ನಿಮಗೆ ಏನೂ ಗೊತ್ತಿಲ್ಲದೇ ಇದ್ದರೂ ವಾದಿ ಹೇಳಿಕೊಟ್ಟಂತೆ ಸಾಕ್ಷಿ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

21. ನಿಮ್ಮ ಸಮ್ಮುಖ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ವ್ಯವಹಾರ ಆಗದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ